

## ಗಲ್ಲಿಯಲ್ಲಿ ಸತೀಶ್ ಯುಗಳ

ಮಗು ಮುಖದ ನೀನಾಸಂ ಸತೀಶ್, ಅಭಿನಯದಲ್ಲಿ ಹುಲಿ ಎನ್ನುವುದಕ್ಕೆ ಅವರ ನಟನೆಯ ಚಿತ್ರಗಳೇ ಉದಾಹರಣೆಯಂತಿವೆ. 'ಲೂಸಿಯಾ', 'ದ್ಯಾವ್ರೇ', 'ಲವ್ ಇನ್ ಮಂಡ್ಯ', 'ರಾಕೆಟ್', 'ಬ್ಯೂಟಿಫುಲ್ ಮನಸುಗಳು' – ಈ ಚಿತ್ರಗಳ ಚೆಲುವು ಹೆಚ್ಚುವಲ್ಲಿ ಸತೀಶ್ ಕೊಡುಗೆ ದೊಡ್ಡದು. ಈ ಅಪರೂಪದ ಕಲಾವಿದನ ಹೊಸ ಚಿತ್ರ 'ಟೈಗರ್ ಗಲ್ಲಿ' ತೆರೆ ಕಾಣಲು ಸಿದ್ಧತೆ ನಡೆಸುತ್ತಿದೆ.

'ಟೈಗರ್ ಗಲ್ಲಿ' ಎರಡು ಕಾರಣಗಳಿಂದ ಕುತೂಹಲ ಹುಟ್ಟಿಸಿರುವ ಸಿನಿಮಾ. ಮೊದಲನೆಯದು, ಇದರ ನಿರ್ದೇಶಕ ರವಿ ಶ್ರೀವತ್ಸ ಎನ್ನುವುದು. ಭೂಗತ ಜಗತ್ತಿನ ಕಥನಗಳನ್ನು ಕಟ್ಟಿಕೊಡುವಲ್ಲಿ ಹೆಸರಾದ ನಿರ್ದೇಶಕ, ತನ್ನ ವ್ಯಾಕರಣಕ್ಕೆ ತದ್ವಿರುದ್ಧವಾದ ಸತೀಶ್‌ರಂಥ ಕಲಾವಿದನನ್ನು ಇಟ್ಟುಕೊಂಡು ಯಾವ ಬಗೆಯ ಸಿನಿಮಾ ರೂಪಿಸಿರಬಹುದು ಎನ್ನುವ ಕುತೂಹಲವಿದು. ಸಿನಿಮಾದ ಬಗೆಗಿನ ಮತ್ತೊಂದು ನಿರೀಕ್ಷೆ – ಸತೀಶ್ ದ್ವಿಪಾತ್ರದಲ್ಲಿ ನಟಿಸಿರುವುದು!

ನಿರ್ದೇಶಕರಾದ ಗಿರಿರಾಜ್, ಶಿವಮಣಿ, ಅಯ್ಯಪ್ಪ ಪಿ. ಶರ್ಮ ಕಲಾವಿದರಾಗಿ ಅಭಿನಯಿಸಿರುವುದು 'ಟೈಗರ್ ಗಲ್ಲಿ'ಯ ಮತ್ತೊಂದು ವಿಶೇಷ. 'ಗಾಳಿಪಟ'ದ ಭಾವನಾ ರಾವ್ ತಾರಾಗಣದಲ್ಲಿರುವ ಮತ್ತೊಂದು ಪ್ರಮುಖ ಹೆಸರು. ಚೆನ್ನೈನಲ್ಲಿ ನಡೆದ ನೈಜ ಘಟನೆಯೊಂದನ್ನು ಆಧರಿಸಿದ 'ಟೈಗರ್ ಗಲ್ಲಿ' ರವಿ ಶ್ರೀವತ್ಸ ಅವರಿಗೆ ಮಹತ್ವಾಕಾಂಕ್ಷೆಯ ಸಿನಿಮಾ. ಶ್ರೀಧರ್ ವಿ. ಸಂಭ್ರಮ್ ಸಂಗೀತ ಸಂಯೋಜನೆ ಹಾಗೂ ಮ್ಯಾಥ್ಯೂ ರಾಜನ್ ಛಾಯಾಗ್ರಹಣ ಚಿತ್ರಕ್ಕಿದೆ.

## ರಚಿತಾ ಯು ಟರ್ನ್!

ಇತ್ತೀಚಿನ ದಿನಗಳಲ್ಲಿನ ಕನ್ನಡ ಚಿತ್ರರಂಗದ ಭರವಸೆಯ ನಾಯಕಿಯರಲ್ಲಿ ರಚಿತಾ ರಾಮ್ ಒಬ್ಬರು. ಗುಳಿಕೆನ್ನೆಯ ಈ ಹುಡುಗಿ ಚೊಚ್ಚಲ ಚಿತ್ರದಲ್ಲೇ ದರ್ಶನ್‌ಗೆ ನಾಯಕಿಯಾದವರು. ನಟಿಸಿದ ಮೊದಲ ಸಿನಿಮಾ 'ಬುಲ್ ಬುಲ್' ದೊಡ್ಡ ಯಶಸ್ಸು ಗಳಿಸಿತು. ಆನಂತರ 'ರನ್ನ' ಚಿತ್ರದಲ್ಲಿ ಸುದೀಪ್‌ಗೆ ನಾಯಕಿಯಾಗಿ, 'ಚಕ್ರವ್ಯೂಹ' ಚಿತ್ರದಲ್ಲಿ ಪುನೀತ್‌ಗೆ ನಾಯಕಿಯಾಗಿ ನಟಿಸಿದರು. 'ಜಗ್ಗು ದಾದಾ' ಹಾಗೂ 'ರಥಾವರ' ರಚಿತಾ ನಟನೆಯ ಜನಪ್ರಿಯ ಚಿತ್ರಗಳ ಪಟ್ಟಿಯಲ್ಲಿವೆ. ಹೀಗೆ ಮೂರ್ನಾಲ್ಕು ವರ್ಷಗಳ ಅಂತರದಲ್ಲಿ ಯಶಸ್ಸಿನ ಉತ್ತುಂಗಕ್ಕೇರಿದ ಅವರೀಗ ತಮ್ಮ ವೃತ್ತಿಜೀವನದ ತಿರುವಿನಲ್ಲಿ ನಿಂತಿದ್ದಾರೆ.

ಸದ್ಯಕ್ಕೆ ರಚಿತಾ ಅವರ ಕಣ್ಣು ತೆಲುಗು ಚಿತ್ರರಂಗದತ್ತ ಹೊರಳಿದೆ. ಅದಕ್ಕಾಗಿ ವಿಶೇಷ ಫೋಟೊ ಶೂಟ್ ಮಾಡಿಸಿಕೊಂಡಿರುವ ಅವರು, ಕರ್ನಾಟಕದಾಚೆಯೂ ತಮ್ಮ ನೆಲೆ ವಿಸ್ತರಿಸಿಕೊಳ್ಳುವ ನಿರೀಕ್ಷೆಯಲ್ಲಿದ್ದಾರೆ. ಈಗಾಗಲೇ ರಚಿತಾ ಕೆಲವು ನಿರ್ಮಾಪಕರೊಂದಿಗೆ ಮಾತುಕತೆಯನ್ನೂ ನಡೆಸಿದ್ದಾರೆ ಎನ್ನಲಾಗಿದೆ.

ಕನ್ನಡದ ನಟಿಯೊಬ್ಬಳು ಪರಭಾಷೆಯಲ್ಲಿ ನಟಿಸುವುದು ದೊಡ್ಡ ವಿಷಯವೇನಲ್ಲ. 'ದ್ವೀಪ'ಸುಂದರಿ ಸೌಂದರ್ಯ ಅವರದು ದಕ್ಷಿಣ ಭಾರತ ಚಿತ್ರರಂಗದಲ್ಲಿ ದೊಡ್ಡ ಹೆಸರು. ಪ್ರಿಯಾಮಣಿ ಅವರಂತೂ ರಾಷ್ಟ್ರಪ್ರಶಸ್ತಿ ಪಡೆದ ಬಹುಭಾಷಾ ನಟಿ. ಪ್ರಣೀತಾ ತೆಲುಗಿನಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ಕನ್ನಡದ ಹುಡುಗಿ. ಹೀಗಾಗಿ ಕನ್ನಡದ ಹುಡುಗಿಯರು ಸೀಮೋಲ್ಲಂಘನದ ಕನಸು ಕಾಣುವುದು ಹೊಸತೇನೂ ಅಲ್ಲ. ಈ ಸಾಲಿಗೆ ರಚಿತಾ ಹೊಸ ಸೇರ್ಪಡೆ ಅಷ್ಟೇ. ಆದರೆ, ಅವರು ಹೀಗೆ ಪರಭಾಷೆಯತ್ತ ಮನಸು ಮಾಡಿರುವ ಹೊತ್ತಿನಲ್ಲೇ ಕನ್ನಡ ಚಿತ್ರರಂಗದಲ್ಲಿ ಅವರಿಗೆ ಕೆಲವು ಕಹಿ ಅನುಭವಗಳು ಆಗಿರುವುದನ್ನು ಗಮನಿಸಬೇಕು. ಕೊನೆಯ ಕ್ಷಣದಲ್ಲಿ ತಪ್ಪಿಹೋದ ಎರಡು ಮೂರು ಚಿತ್ರಗಳು ಈ ಯುವನಟಿಯ ಬೇಸರಕ್ಕೆ ಕಾರಣವಾಗಿದೆ ಎಂದು ಗಾಂಧಿನಗರ ಪಿಸುಗುಡುತ್ತಿದೆ.



